ಶ್ರೀ ಟಿ. ಸುಬ್ರಹ್ಮಣ್ಯರವರು.—ಆಗಾಗ್ಯೆ ಪಾನ ನಿರೋಧವನ್ನು ಸ್ವಲ್ಪ ಸ್ವಲ್ಪ ಹೆಚ್ಚಾಗಿ ಮುಂದುವರಿಸಿ ಕೊಂಡು ಹೋಗುವುದು ಉತ್ತಮವಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಹೌದು.

ಶ್ರೀ ಟಿ. ಸುಬ್ರಹ್ಮಣ್ಯರವರು.–ಆದ್ದರಿಂದ ಈ ವರ್ಷ ಪುನಃ ಪರಿಶೀಲನೆ ಮಾಡಿ ಒಂದು ಡಿಸ್ಟ್ರಿಕ್ಟ್‌ಗೆ ಜಾರಿ ಮಾಡಲು ಆಲೋಚಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನ್ಯಾಲ್ಯಾರು ದಿನದಲ್ಲಿ ಅದು ಇತ್ಯರ್ಥವಾಗಬೇಕಾಗಿದೆ.

Sri V. S. NARAYANA RAO (Bangalore City-General).–Does the extension of Prohibition depend on the report of this Committee?

ಅಧ್ಯಕ್ಷರು.—ಸಮಿತಿಯವರು ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎ. ಎಸ್. ನಾರಾಯಣರಾಯರು.—ಅವರು ಆಲೋಚಿಸುತ್ತಿದ್ದಾರೆ ಎಂದು ಹೇಳಿದರು. ಎಂದರೆ ಅವರ ವರದಿಯಮೇಲೆ ತಮ್ಮ ನೀತಿ ಅನ್ವಯವಾಗುತ್ತದೆಯೇ ಎಂದು ನನ್ನ ಪ್ರಶ್ನೆ.

Mr. SPEAKER.—Government will study this.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ ನಿಮ್ನಪಂಗಡ).—Wet ಡಿಸ್ಟ್ರಿಕ್ಟ್‌ಗಳಿಗೆ ಪಾನ ನಿರೋಧವನ್ನು ಜಾರಿ ಮಾಡಬೇಕೆಂದು ಈ ಸಭೆಯಲ್ಲಿ ಕೇಳಲಾಗಿತ್ತೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಎರಡು ದಿನ ದಿಂದ ಚೆರ್ಚೆಯಾಗಿರತಕ್ಕದ್ದು ಎಲ್ಲರ ಗಮನಕ್ಕೆ ಬಂದಿದೆ.

ಶ್ರೀ ಟಿ. ಹನುಮಯ್ಯನವರು.—ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಲೋಚನೆ ಯಿಲ್ಲದೆ ಎಂದು ತಿಳಿಸಿದ್ದೇನೆ.

ಶ್ರೀ ಟಿ. ಹನುಮಯ್ಯನವರು.—ಪಾನನಿರೋಧ ವನ್ನು ಜಾರಿ ಮಾಡಿರುವ ಜಿಲ್ಲೆಗಳಲ್ಲ ಕುಡಿಯತಕ್ಕ ಜನ ಗಳ ಆರ್ಥಿಕ ಪರಿಸ್ಥಿತಿ ಎಷ್ಟೋ ಮಟ್ಟಿಗೆ ಉತ್ತಮ ವಾಗಿದೆ ಎಂದು ಒಪ್ಪುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.–ಒಪ್ಪಿಕೊಳ್ಳಲೇ ಬೇಕು. ಬಹಳ ಜನಗಳ ಪರಿಸ್ಥಿತಿ ಉತ್ತಮ ಗೊಂಡಿದೆ.

ಶ್ರೀ ಟಿ. ಹನುಮಯ್ಯನವರು.—ಈ ವಿಷಯದಲ್ಲಿ ಸರ್ವೇ ಮಾಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ವೇ ಮಾಡಬೇಕಾಗಿಲ್ಲ; ನಾನಾ ಮೂಲಕ ತಿಳಿದುಕೊಳ್ಳುವು ದಕ್ಕೆ ಅವಕಾಶವಿದೆ.

ಶ್ರೀ ಟಿ. ಹನುಮಯ್ಯನವರು.—ಆದ್ದರಿಂದ ಇತರ ಜಿಲ್ಲೆಗಳಲ್ಲೂ ಜಾರಿ ಮಾಡಿದರೆ ಕುಡಿಯತಕ್ಕ ಜನಗಳು ಉತ್ತಮ ಸ್ಥಿತಿಗೆ ಬರುತ್ತಾರೆ ಎಂಬುದು ಸರ್ಕಾರದವ ರಿಗೆ ಗೊತ್ತಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯೋಚನೆ ಯಿಲ್ಲದೆ ಎಂದು ತಿಳಿಸಿದ್ದೇನೆ.

ಶ್ರೀ ಟಿ. ಹನುಮಯ್ಯನವರು.—ಜಾಗ್ರತೆ ಇತರ ಜಿಲ್ಲೆಗಳಲ್ಲೂ ಜಾರಿ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಭರವಸೆ ನೀಡುತ್ತಿರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಲೋಚನೆ ಯಿಲ್ಲದೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು—ರಿಟ್ರಾಸೀಡೆಡ್ ಪ್ರದೇಶ).—ಕಳ್ಳ ಬಟ್ಟಿ ಇಳಿಸುವುದು ಕಮ್ಮಿ ಆಗಿದೆ ಅಥವಾ ಹೆಚ್ಚಾಗಿದೆ ಎಂಬ ಬಗ್ಗೆ ಒಂದು ಸಮಿತಿಯನ್ನು ಏರ್ಪಾಡು ಮಾಡಿ ಅವರಿಂದ ಒಂದು ವರದಿಯನ್ನು ತೆಗೆದುಕೊಂಡರೆ, ಇದು ಹೇಗೆ ನಡೆಯು ತ್ತಿದೆ ಎಂಬುದನ್ನು ತಿಳಿಸುತ್ತಾರೆ ಅಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪೋಲೀಸ್ ನವರ ವಿಶೇಷ ಶಿಬ್ಬಂದಿ ಮಂಜೂರು ಮಾಡಿದ್ದೇವೆ. 1-4-50 ರಿಂದ ಅವರು ಕೆಲಸ ಮಾಡುತ್ತಾ ಇದ್ದಾರೆ. ಈಗ 11 ತಿಂಗಳು ಕೆಲಸ ನಡೆದಿರುವುದರಿಂದ ನಾವು ಯಾವ ರೀತಿ ಇದೆ ಎಂಬುದನ್ನು ಹೇಳಬಹುದು.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಸಮಿತಿ ನಿರ್ಧರಿ ಸುವುದರಿಂದ ಸರಿಯಾದ ವರದಿ ಬರುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಮಿತಿ ನೇಮಕ ಮಾಡುವುದಕ್ಕೆ ಆಕ್ಷೇಪಣೆ ಅವಶ್ಯಕತೆ ಈಗಿಲ್ಲ ಎಂದು ಹೇಳಿದ್ದೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—ಪ್ರತಿ ತಾಲ್ಲೂಕಿನಲ್ಲೂ ಪಾನನಿರೋಧ ಸಮಿತಿ ಎಂಬುದಾಗಿ ಮಾಡಿರುವುದು ನಿಜವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅಂಕಿ ವರದಿ ಯನ್ನು ಆಗಾಗ್ಯೆ ತರಿಸಿಕೊಂಡು ಅದರಿಂದ ಅಂಕಿ ಅಂಶ ಗಳನ್ನು ನಿರ್ಧರಿಸಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.–ಅದು ಡೆಪ್ಯುಟಿ ಕಮಿಷನರ ಮೂಲಕ ಎಕ್ಸೈಜು ಕಮಿಷನರವರಿಗೆ ಬರುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಪ್ರೋಹಿಬಿಷನ್ ಸಮಿತಿಯವರು ವರದಿಕಳುಹಿಸುವುದಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಳುಹಿಸು ತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.— ಆ ಸಮಿತಿಯ ವರ ವರದಿಯಲ್ಲಿ ಅಡಕವಾಗಿರುವ ಅಂಶಗಳನ್ನು ಎಷ್ಟು ಮಟ್ಟಿಗೆ ಕಾರ್ಯರೂಪಕ್ಕೆ ತರಬೇಕೆನ್ನುವುದು ಆಲೋಚ ನೆಯಲ್ಲಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದೆಲ್ಲಾ ಆಲೋಚನೆಯಲ್ಲಿದೆ ಎಂದು ಹೇಳಿದ್ದೇನೆ.

Co-operative Societies, their functioning and development

*Q.—93. **Sri K. PUTTASWAMY** (Mandya District—General).– Will the Government be pleased to state :—

(a) The types of co-operative societies that were in existence prior to 1948;

(b) The types of co-operative societies that are being started and are functioning since 1948;

(c) The nature of development envisaged?

A.—**The Hon'ble Sri T. MARIAPPA** (Home Minister).—

(a) 1.	Central Financing Banks (including the 3 District Central Banks),	4
2.	Central Land Mortgage Bank.	1
3.	Primary Land Mortgage Co-operative Societies.	79
4.	Agricultural Marketing Societies.	49
5.	Grain Banks ...	28
6.	Agricultural and Non-Agricultural Credit Co-operative Societies.	2,104
7.	House Building Co-operative Societies	37
8.	Industrial Co-operative Societies.	67
9.	Consumers' Co-operative Societies.	155
	Total ...	2,523

(b) 1. Multipurpose Co-operative Societies.

2. Co-operative Farming Societies.

3. Co-operative Printing Society.

4. Telis Co-operative Societies.

5. Cotton Handloom Weavers' Co-operative Society.

6. Silk Handloom and Powerloom Co-operative Societies.

7. Central Co-operative Housing Corporation.

(c) Catering to the prime necessities of the raiyats to encourage telis industry, distribution of yarn and silk and to secure finance and other facilities for house building operations, through the medium of Co-operative Societies.

ಶ್ರೀ ಕೆ. ಪುಟ್ಟಸ್ವಾಮಿಯವರು.—ಮಲ್ಟಿಪರ್‌ಪಸ್ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಯಾವ ಯಾವ ಹುದ್ದೆಯಲ್ಲಿ ಸರ್ಕಾರಿ ನೌಕರರು ಕೆಲಸ ಮಾಡುತ್ತಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾಲ್ಲೂಕು ಮಲ್ಟಿಪರ್‌ಪಸ್ ಕೋ-ಆಪರೇಟೀವ್ ಸೊಸೈಟಿಯಲ್ಲಿ ಕೋ-ಆಪರೇಟೀವ್ ಸೊಸೈಟಿ ಇನ್‌ಸ್ಪೆಕ್ಟರು ಎಕ್ಸ್ ಅಫಿಷಿಯೋ ಸೆಕ್ರೆಟರಿಗಳಾಗಿರುತ್ತಾರೆ. ಅಗ್ರಿಕಲ್ಚರಲ್ ಇಲಾಖೆಯ ಪುಡ್ ಡಿಪೋ ಸೇಲ್ಸ್‌ಮನ್ ಮತ್ತು ವಾಚ್‌ಮನ್ ಸಹ ಕೆಲಸ ಮಾಡುತ್ತಾ ಇದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ರೆವಿನ್ಯೂ ಇನ್‌ಸ್ಪೆಕ್ಟರಿಗೂ ಕೂಡ ಅದರಲ್ಲಿ ಸಂಪರ್ಕವಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಲ್ ಮಲ್ಟಿಪರ್‌ಪಸ್ ಕೋ-ಆಪರೇಟೀವ್ ಸೊಸೈಟಿಗಳಿಗೆ ರೆವಿನ್ಯೂ ಇನ್‌ಸ್ಪೆಕ್ಟರು ಎಕ್ಸ್ ಅಫಿಷಿಯೋ ಸೆಕ್ರೆಟರಿಯಾಗಿದ್ದಾರೆ. ಪುಡ್ ಡಿಪೋ ಇದ್ದರೆ ಅಲ್ಲಿಯ ಕ್ಲಾರ್ಕ್ ಮತ್ತು ಮೆಷರರು ಕೆಲಸ ಮಾಡುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಬೇರೆ ಬೇರೆ ಇಲಾಖೆಯ ನೌಕರರು ಅಲ್ಲಿ ಕೆಲಸ ಮಾಡುವುದರಿಂದ ಅವರು ಕೆಲಸ ಮಾಡಬೇಕಾದ ಕಡೆ ನರಿಯಾಗಿ ಕೆಲಸ ನಡೆಯದೇ ಇರುವುದು ಗೊತ್ತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾದರೂ ಒಂದೆರಡು ಕಡೆ ಆ ರೀತಿ ದೂರು ಬಂದಿರಬಹುದು ಅಷ್ಟೆ. ಬಾಕಿ ಕಡೆ ಎಲ್ಲಾ ಚೆನ್ನಾಗಿ ಕೆಲಸ ನಡೆಯುತ್ತಾ ಇದೆ.

Sri K. PUTTASWAMY.—What are the works undertaken by these multi-purpose co-operative societies?

The Hon'ble Sri T. MARIAPPA.—The whole thing is mentioned in the Government Order establishing the societies. The very idea is multi-purpose, *i.e.*, distribution of manure, seed, agricultural implements, purchase and sale of other commodities which are required by the agriculturists, and so on.

Sri K. PUTTASWAMY.—Is the manufacturing of certain articles undertaken by these societies?

The Hon'ble Sri T. MARIAPPA.—Yes. In fact, some of the societies have undertaken the manufacturing of carts, rattan works, manufacture of jaggery pans.

Sri K. PUTTASWAMY.—What agricultural products are given to the Government by these societies?

The Hon'ble Sri T. MARIAPPA.—It is only this year they were started. Their agricultural operations must have been over very recently. They have purchased 1,214 pallas of foodgrains and 1,312 maunds of cotton.

Sri K. PUTTASWAMY.—Are these Cotton Handloom Weavers' Societies functioning effectively?

The Hon'ble Sri T. MARIAPPA.—They were organised very recently and a majority of them have begun to function satisfactorily.

Sri K. PUTTASWAMY.—Since when?

The Hon'ble Sri T. MARIAPPA.—The organisation of these societies began about 4 or 5 months back and they have undertaken the distribution of yarn very efficiently.

Sri K. PUTTASWAMY.—Is the distribution of yarn entrusted completely to the Handloom Weavers' Co-operative Societies?

The Hon'ble Sri T. MARIAPPA.— That matter is under examination.

Sri H. SIDDAVEERAPPA (Chitaldrug District—General),—In the matter of affording credit facilities to these societies, is there a uniform rule ?

The Hon'ble Sri T. MARIAPPA.— There is no uniform rule. It all depends upon the capital that they are going to raise locally.

Sri H. SIDDAVEERAPPA.—I want to know whether any credit facility is given to any of these societies ?

The Hon'ble Sri T. MARIAPPA — Which class of society the Hon'ble Member is referring to ?

Sri H. SIDDAVEERAPPA.—I am referring to the Agricultural Marketing Societies. Are there any credit facilities? You have said there are 49 societies ?

The Hon'ble Sri T. MARIAPPA. — Sir, I think some societies must be handling loan credits of which, perhaps, his society might be one.

Sri H. SIDDAVEERAPPA.—I want to know regarding the multi-purpose societies, whether they are to be made self-sufficient ?

The Hon'ble Sri T. MARIAPPA.— They were started very recently and we are trying to see that these are made self-sufficient as early as possible.

Sri H. SIDDAVEERAPPA.—May I know whether you are continuing the practice of having the Revenue Inspectors and Agricultural Inspectors in the societies ?

The Hon'ble Sri T. MARIAPPA.— The whole matter has to be very carefully examined because the societies were started very recently and unless we are sure that they are functioni g very satisfactorily, it is very difficult fo relax. The idea is to entrust the whole work to the local people.

Sri H. SIDDAVEERAPPA.—Have the accounts of these been audited ?

The Hon'ble Sri T. MARIAPPA.—Yes. The accounts of a large number of them have been audited and I am prepared to furnish the exact figures.

Sri H. SIDDAVEERAPPA.— What is the information disclosed by the audit? Are they working satisfactorily ?

The Hon'ble Sri T. MARIAPPA.— They are working very satisfactorily with the exception of 5 or 6.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—49 ಅಗ್ರಿಕಲ್ಚರ್ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳಲ್ಲಿ, ಡಿಸ್ಟ್ರಿಕ್ಟ್‌ನಲ್ಲಿ ಎಷ್ಟಿವೆ, ತಾಲ್ಲೂಕಿನಲ್ಲಿ ಎಷ್ಟಿವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಡಿಸ್ಟ್ರಿಕ್ಟ್‌ನಲ್ಲಿ ಯಾವುದಾದರೂ ಇದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸಿನಲ್ಲಿ ಇರಬಹುದು. ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಇರುವುದನ್ನು ಕೇಳುತ್ತಾ ಇದ್ದೇನೆ. ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿ ಇದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—9 ಡಿಸ್ಟ್ರಿಕ್ಟ್‌ನಲ್ಲೂ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಬಂಡವಾಳ ಏನಾದರೂ ಇದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂಡವಾಳ ಅವರೇ ಮಾಡಿಕೊಳ್ಳಬೇಕು; ಷೇರುಗಳನ್ನು ಕೊಟ್ಟು, ಫಿಕ್ಸೆಡ್ ಡೆಪಾಸಿಟ್ ತೆಗೆದುಕೊಂಡರೆ ಸಂತೋಷ.

ಶ್ರೀ ಎಸ್. ರಂಗರಾಮಯ್ಯನವರು.—ಅಗ್ರಿಕಲ್ಚರಲ್ ಕೋ-ಆಪರೇಟೀವ್ ಸೊಸೈಟಿಗಳು ಕೆಲಸಮಾಡುತ್ತಾ ಇಲ್ಲ ಎಂಬುದುಗೊತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಮಾಡುತ್ತಾ ಇವೆ, ಕೆಲವು ಮಾಡುತ್ತಾ ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಎಷ್ಟು ಡಿಸ್ಟ್ರಿಕ್ಟ್‌ನಲ್ಲಿ ಕೆಲಸ ಮಾಡುತ್ತಾ ಇವೆ, ಎಷ್ಟು ಡಿಸ್ಟ್ರಿಕ್ಟ್‌ನಲ್ಲಿ ಕೆಲಸ ಮಾಡುತ್ತಾ ಇಲ್ಲ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಅಲ್ಲರುವ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸೊಸೈಟಿಗೆ ಅಲ್ಲರತಕ್ಕ ಪ್ರೈಮರಿ ಸೊಸೈಟಿಗಳು ತಾನೆ ಮೆಂಬರುಗಳಾಗುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎರಡೂ ಇದೆ; ಕೆಲವು ಮೆಂಬರುಗಳೇ ಮಾಡಿಕೊಳ್ಳಬಹುದು ಮತ್ತು ಆ ಪ್ರದೇಶದಲ್ಲರತಕ್ಕ ಪ್ರೈಮರಿ ಸೊಸೈಟಿಗಳನ್ನೂ affiliate ಮಾಡಿಕೊಳ್ಳಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲ ಬೇರೆ independent ಮೆಂಬರುಗಳನ್ನು ಮಾಡಿಕೊಳ್ಳಕೂಡದೆಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—I don't remember exaclty the bye-laws of that particular district marketing society.

ಶ್ರೀ ಎಸ್. ರಂಗರಾಮಯ್ಯನವರು.—ಮಲ್ಟಿಪರ್ಪಸ್ ಸೊಸೈಟಿಗೇ ಆಗಲಿ ಮಾರ್ಕೆಟಿಂಗ್ ಸೊಸೈಟಿಯವರಿಗೇ ಆಗಲಿ ಅವರು ಬಂಡವಾಳ ಹಾಕದೆ, ಷೇರು ತೆಗೆದು ಕೊಳ್ಳದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೇನೋ ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಒಂದು peculiarity. ಅದೇ ಚಿತ್ರದುರ್ಗ ಡಿಸ್ಟ್ರಿಕ್ಟ್ ನೋಡುವುದಾದರೆ ಅಲ್ಲಿ ಅವರು ಬಹಳ ಚೆನ್ನಾಗಿ ಕೆಲಸ ನಡೆಸುತ್ತಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಹೀಗಾಗಿರುವುದರಿಂದ ಎಲ್ಲರೂ ಆ ಡಿಸ್ಟ್ರಿಕ್ಟ್ ಮಲ್ಟಪರ್ಪಸ್ ಸೊಸೈಟಿಯ ಷೇರುಗಳನ್ನು ತೆಗೆದುಕೊಳ್ಳಬೇಕೆಂದು ಒಂದು ನಿಯಮವನ್ನು ವಿಧಿಸುವುದಕ್ಕೆ ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಸ್ವಲ್ಪ ಕಷ್ಟವೆಂದೇ ಹೇಳಬೇಕು. For, co-operation is after all a voluntary effort. I hope that with the influence that my friend commands he can immediately put it on a stable basis.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಕೆಲಸ ಮಾಡಿಸಿ ಇದ್ದಮೇಲೆ ಅದನ್ನು ಮುಚ್ಚಿಬಿಡುವುದೇ ಉತ್ತಮವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಒಂದು ಸಾಧನ ಕೊಡುತ್ತೇವೆ. ಅದನ್ನು ಎಷ್ಟು ಚತುರತೆಯಿಂದ ಉಪಯೋಗಿಸಿಕೊಳ್ಳಬೇಕೋ ಅಷ್ಟು ಉಪಯೋಗಿಸಿಕೊಂಡು ಜನರಿಗೆ ಉಪಕಾರ ಮಾಡಿದರೆ ಸಂತೋಷ.

ಶ್ರೀ ಎಸ್. ರಂಗರಾಮಯ್ಯನವರು.—ತಾವು ಮಲ್ಟಿ ಪರ್ಪಸ್ ಸೊಸೈಟಿಯವರಿಗೆ ಕೊಟ್ಟಿರತಕ್ಕ ಸಿಬ್ಬಂದಿಯನ್ನು ತೆಗಯಬೇಕೆಂದೇನಾದರೂ ಯೋಚನೆ ಮಾಡಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮಗೆ ಖರ್ಚು ಜಾಸ್ತಿಯಾಗುತ್ತಿದೆಯೆಂದು ಹೇಳಿ ಸಾಧ್ಯವಿದ್ದರೆ ಮಲ್ಟಿಪರ್ಪಸ್ ಸೊಸೈಟಿಗಳವರೇ ತಮ್ಮ ಸಿಬ್ಬಂದಿಯನ್ನು ಏರ್ಪಡಿಸಿಕೊಳ್ಳಬೇಕೆಂದು ಅವರಿಗೆ ಗಮನಕ್ಕೆ ತಂದಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಬರುವ ಏಪ್ರಿಲ್ ಒಂದನೆಯ ತಾರೀಖಿನಿಂದ ಅಲ್ಲಿನ ಸಿಬ್ಬಂದಿಯನ್ನು ತೆಗೆಯಬೇಕೆಂದಿದ್ದಾರೆಂಬ ಸುದ್ದಿಗೆ ಆಧಾರ ವಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಏಪ್ರಿಲ್ ತಿಂಗಳಿನಿಂದ ನಮ್ಮ ಸಿಬ್ಬಂದಿಯನ್ನು ಕೊಡುವುದಕ್ಕಾಗುವುದಿಲ್ಲವೆಂದೂ ನೀವೇ ಏರ್ಪಾಡು ಮಾಡಿಕೊಳ್ಳಬೇಕೆಂದೂ ತಿಳಿಸಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಹಾಗೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಮೊದಲಿನಂತೆ ಸರ್ಕಾರಿ ಸಿಬ್ಬಂದಿಯನ್ನು ಕೊಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಪರಿಶೀಲನೆ ಮಾಡಬೇಕಾದ ವಿಚಾರ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡರು (ತುಮಕೂರು ಜಿಲ್ಲೆ).—ಈ ಸೊಸೈಟಿಗಳಿಗೆ ನಿಮ್ಮದೇ ಸಿಬ್ಬಂದಿ ತೆಗೆದುಕೊಳ್ಳಬೇಕೆಂದು ಎಷ್ಟು ಸಾರಿ ಸೂಚನೆ ಕೊಟ್ಟಿದೆ!

ಮಾನ್ಯ ಶ್ರೀ ಟಿ. ಮರಿಯಪ್ಪನವರು—ಒಂದೇ ಸಾರಿ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗ ಸರ್ಕಾರದವರು ಮಾಡಿರತಕ್ಕ ಆಜ್ಞೆಯ ಪ್ರಕಾರ ಇದುವರೆಗೂ ನೀವು ಮಾಡಿರತಕ್ಕ ಏರ್ಪಾಡನ್ನು ಮುಂದುವರಿಸುತ್ತೀರಾ? ಅಥವ ಬದಲಾವಣೆ ಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಷಯ ಪರಿಶೀಲನೆಯಲ್ಲಿದೆಯೆಂದು ಆಗಲೇ ಹೇಳಿದ್ದೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಏಪ್ರಿಲ್ ಒಂದನೆಯ ತಾರೀಖಿನಿಂದ ಆ ಸಿಬ್ಬಂದಿಯನ್ನು ನಿಲ್ಲಿಸುವುದಕ್ಕೆ ಸೂಚನೆ ಕೊಟ್ಟಿದೆಯೆಂದು ಹೇಳಿದಿರಿ. ಅಂದರೆ ಈಗಾಗಲೇ ಈ ಮಲ್ಟಿ ಪರ್ಪಸ್ ಸೊಸೈಟಿಗಳು ತಮ್ಮ ಸ್ವಂತ ಶಕ್ತಿಯಿಂದಲೇ ಕೆಲಸ ಮಾಡಬಲ್ಲವೆಂದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಮಾಡಬಲ್ಲವು ಎಂದು ತಿಳಿದು ಈ ವಿಷಯವನ್ನು ಪರಿಶೀಲನೆಮಾಡಿ ಸಾಧ್ಯಾಸಾಧ್ಯತೆಯನ್ನು ತಿಳಿಸಬೇಕೆಂದು ರಿಜಿಸ್ಟ್ರಾರ್‌ರವರಿಗೆ ತಿಳಿಸಿದ್ದೇವೆ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡರು.—ಹಾಗೆ ನೀವು ನಿಮ್ಮ ಸಿಬ್ಬಂದಿಯನ್ನು ತೆಗೆದುಬಿಟ್ಟರೆ ಆ ಸೊಸೈಟಿಗಳು ತಾವೇ ತಮ್ಮ ಸ್ವಂತ ಶಕ್ತಿಯಿಂದ ಕೆಲಸ ಮಾಡಲು ಸಾಧ್ಯವಿಲ್ಲವೆಂದು ತಿಳಿದುಬಂದರೆ ಇನ್ನೂ 6 ತಿಂಗಳು ಒಂದು ವರ್ಷ ನಿಮ್ಮ ಸಿಬ್ಬಂದಿಯನ್ನೇ ಮುಂದುವರಿಸುತ್ತೀರಾ?

Sri M. N. JOIS.—On a point of order, Sir. These are hypothetical questions.

ಶ್ರೀ ಎ. ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಈ ಸೊಸೈಟಿಗಳಲ್ಲಿರುವ ಸಿಬ್ಬಂದಿಯವರು ಯಾರ ಹತೋಟಿಯಲ್ಲಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೋ-ಆಪರೇಟಿವ್ ಸೊಸೈಟಿಗಳವರ over-all control ನಲ್ಲಿದ್ದಾರೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಸೊಸೈಟಿಯ ಸೆಕ್ರೆಟರಿಯವರಿಗೂ ಮತ್ತು ಪ್ರೆಸಿಡೆಂಟರವರಿಗೂ ಇವರ ಮೇಲೆ ಅಧಿಕಾರವಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸೊಸೈಟಿ ಸೆಕ್ರೆಟರಿಗಳೂ ಮತ್ತು ಪ್ರೆಸಿಡೆಂಟರೂ ಇವರ ವಿಷಯದಲ್ಲಿ ತಮ್ಮ ಒಂದು healthy influence ನ್ನು ಬೀರಬಹುದು.

ಶ್ರೀ ಎ. ಸುಬ್ಬರಾಯಶೆಟ್ಟರು.—ಅವರ ಅಭಿಪ್ರಾಯವನ್ನೇ ಕೇಳದೆ ಈ ನೌಕರರನ್ನು ಮೂರು ಮೂರು ತಿಂಗಳಿಗೂ ವರ್ಗಾಯಿಸುತ್ತಿರುವುದರಿಂದ ತೊಂದರೆಯಾಗುವುದಿಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಪದೇ ಪದೇ ವರ್ಗಾಯಿಸುತ್ತಿರುವುದನ್ನು ನಮ್ಮ ಗಮನಕ್ಕೆ ತಂದರೆ ಹಾಗೆ ಮಾಡದಂತೆ ಏರ್ಪಾಡುಮಾಡುತ್ತೇವೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಅವರುಗಳಿಗೆ ಸಂಬಳ ಕೊಡುವುದಕ್ಕೆ ಮುಂಚೆ ಅವರ ವಿಷಯದಲ್ಲಿ ಸೊಸೈಟಿಯವರ ಅಭಿಪ್ರಾಯ ಅಥವಾ ಸರ್ಟಿಫಿಕೇಟ್ ತೆಗೆದುಕೊಂಡು ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯೋಚನೆ ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಈ ಸೊಸೈಟಿಗಳು ಕಂಟ್ರೋಲ್ ಪದಾರ್ಥಗಳಾದ, ಆಹಾರ, ಗೊಬ್ಬರ, ಬೀಜ ಮತ್ತು ವ್ಯವಸಾಯದ ಮುಟ್ಟುಗಳನ್ನು ಎಲ್ಲರಿಗೂ ಹಂಚುತ್ತಿದ್ದಾರೆ ಅಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಹಂಚುತ್ತಿದ್ದಾರೆ.

ಶ್ರೀ ಜಿ. ನಾರಾಯಣಗೌಡರು.—ಹೀಗೆ ಅವು ಹಂಚಿಕೆಮಾಡುತ್ತಿರುವುದರಿಂದ ಅಲ್ಲಿರತಕ್ಕ ಗುಮಾಸ್ತರುಗಳಿಗೆ ತಮ್ಮ ಕೋಟಾ ಖರ್ಚನ್ನು ಕೊಡುವುದು ನ್ಯಾಯವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದುವರೆಗೂ ಕೊಡುತ್ತಿದ್ದೆವು. ಇನ್ನುಮುಂದೆ ಅವರೇ ಮಾಡಿಕೊಳ್ಳಬೇಕೆಂದು ಹೇಳಿದ್ದೇವೆ

ಶ್ರೀ ಜಿ. ನಾರಾಯಣಗೌಡರು.—ಮುಂದೆ ಅವರಿಗೆ ಮಾಡಿಕೊಳ್ಳುವುದಕ್ಕೆ ಸಾಧ್ಯವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅದು ಪರಿಶೀಲನೆ ಮಾಡಬೇಕಾದ ವಿಚಾರ.

ಶ್ರೀ ಜಿ. ನಾರಾಯಣಗೌಡರು.— ಅದನ್ನು ಪರಿಶೀಲನೆಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಮಿಲ್ಕ್ ಪರ್ಪಸ್ ಸೊಸೈಟಿಗಳಿಗೆ ಈಗ ನೀವು ಸಿಬ್ಬಂದಿ ಕೊಟ್ಟಿರುವುದರಿಂದ ಈ ಸಿಬ್ಬಂದಿ ಬಗ್ಗೆ ಆಗುವ ಎರಡು ಲಕ್ಷ ರೂಪಾಯಿ ಆಹಾರದ ಇಲಾಖೆಗೆ ಚಾರ್ಜ್ ಆಗುತ್ತದೆಯಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಎಲ್ಲೆಲ್ಲಿ ಆಹಾರದ ಡಿಪೋಗಳಿತ್ತೊ ಅಲ್ಲಿ ಅವುಗಳನ್ನೂ, ಅಲ್ಲದ್ದೆ ಅಳತೆಮಾಡುವವರನ್ನೂ, ಮತ್ತು ಗುಮಾಸ್ತರನ್ನೂ, ಅಲ್ಲಿರುವ ಸರ್ಕಾರ್ ಸೊಸೈಟಿಗೆ ವಹಿಸಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಕೇಳಿದ್ದು, ನೀವು ಈ ಎರಡು ಲಕ್ಷ ರೂಪಾಯಿಗಳನ್ನು ಆಹಾರದ ಬಾಬಿಗೆ charge ಮಾಡುತ್ತೀರಾ, ಅಥವಾ ಇಲ್ಲವೆ ಎಂದು ಮಾತ್ರ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೇ ಅರ್ಥದಲ್ಲೇ ನಾನು ಉತ್ತರ ಹೇಳಿದ್ದೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಈ ರೀತಿ ಮಾಡುವುದು ಸರಿಯಲ್ಲ, ಅದನ್ನು ಕೋ-ಆಪರೇಟಿವ್ ಸೊಸೈಟಿಗಳಿಗೇ charge ಮಾಡಬೇಕೆಂದು ಆಡಿಟರು ತಮಗೆ ತಿಳಿಸಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಡಿಟರು ಹಾಗೆ ಹೇಳಿಲ್ಲ. ಈ ಸೊಸೈಟಿಗಳು ಆಹಾರವನ್ನು ಹಂಚಿಕೆಮಾಡುವುದರ ಜೊತೆಗೆ ಬಾಕಿ ವ್ಯಾಪಾರವನ್ನೂ ಮಾಡುವುದರಿಂದ, ಇನ್ನು ಮುಂದೆ ಅವರೇ ಏಕೆ ತಮ್ಮ ಸಿಬ್ಬಂದಿಯನ್ನು ಏರ್ಪಾಡು ಮಾಡಿಕೊಳ್ಳಕೂಡದೆಂದು ಹೇಳಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಹಾಗಾದರೆ ಇದನ್ನೇ ಮುಂದುವರಿಸಬೇಕೆಂದು ಈಗ ಆರ್ಡರ್ ಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—31-5-51 ರ ವರೆಗೂ ಈಗಿನ ಆರ್ಡರೇ ಇದೆ.

ಶ್ರೀ ಎಚ್. ಎಂ ಚೆನ್ನಬಸಪ್ಪನವರು.— ಮುಂದಕ್ಕೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯೋಚಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೀಗೆ ನೀವು ನಿಮ್ಮ ಸಿಬ್ಬಂದಿಯನ್ನು ತೆಗೆದುಕೊಂಡುಬಿಟ್ಟರೆ ಅವು self-sufficient ಆಗಿ ಕೆಲಸಮಾಡುತ್ತವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವ್ಯಾಪಾರ ಮಾಡದೆ ಇದ್ದರೆ self-sufficient ಆಗುತ್ತವೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಕಂಟ್ರೋಲ್ ಪದಾರ್ಥಗಳ ವ್ಯಾಪಾರವನ್ನು ಬಿಟ್ಟರೆ ಬಾಕಿ ಪದಾರ್ಥಗಳ ಮಾರಾಟದಿಂದಲೇ ಇವುಗಳು ನಡೆದು ಕೊಂಡು ಹೋಗುವುದು ಸಾಧ್ಯವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಾಕಿಯುದರಿಂದಲೇ maintain ಮಾಡಿಕೊಳ್ಳುವುದು ಕಷ್ಟ.

Mr. SPEAKER.—Question time is over.

UNSTARRED QUESTIONS

(to which answers are laid on the table).

Industrial Concerns taking loans exceeding Rs. 10 lakhs from Government.

*Q.—215. **Sri G. VEERAPPA** (Chitaldrug District—General).—

Will the Government be pleased to state :—

(*a*) the number of Industrial concerns in the State that have taken loans exceeding Rs. 10 lakhs from Government ;

(*b*) whether the Central Industrial Finance Corporation have decided to advance such money to Government and get the loans transferred to their name ;

(*c*) the action taken by Government in this respect ?

A.—**The Hon'ble Sri H. C. DASAPPA** (Minister for Finance and Industries).—

(*a*) Three.

(*b*) The Government are not aware of any such decision.

(*c*) The question is not clear.

Proper distribution of iron and steel products.

*Q.—225. **Sri B. CHANNABYRE GOWDA** (Bangalore District—General).—

Will the Government be pleased to state :—

(*a*) the quantity of iron and steel products annually reserved for public use out of the total quantity manufactured in the Bhadravati Iron and Steel Works ;

(*b*) out of this, the quantity allotted to the people in urban areas and to the people in rural areas ;

(*c*) the procedure adopted for distributing the same to the people in urban areas and rural areas ?

A.—**The Hon'ble Sri H. C. DASAPPA** (Minister for Finance and Industries).—

(*a*) The entire steel production of the Mysore Iron and Steel Works, Bhadravati, comes under the control of the Central Government for distribution